ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

2

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಸಭೆ ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE :

# ರಾಜ್ಯಸಭೆಗೆ ಇಂದು ಅಧಿಸೂಚನೆ

ವಿ.ವಾ. 11.11.20

| | |
|---|---|
| ನಾಮಪತ್ರ ಸಲ್ಲಿಕೆ | ನ.11ರಿಂದ 18 (ಸಾರ್ವಜನಿಕ ರಜಾ ದಿನ ಹೊರತುಪಡಿಸಿ) |
| ನಾಮಪತ್ರಗಳ ಪರಿಶೀಲನೆ | ನ.19ರ ಬೆಳಗ್ಗೆ 11ಕ್ಕೆ |
| ನಾಮಪತ್ರ ವಾಪಸ್ ಕಡೇ ದಿನ | ನ.23 |
| ಮತದಾನ | ಡಿ.1 |
| ಒಟ್ಟು ಮತದಾರರು | 222 |

**ಬೆಂಗಳೂರು:** ಅಶೋಕ್ ಗಸ್ತಿ ಅಕಾಲಿಕ ನಿಧನದಿಂದ ತೆರವಾಗಿರುವ ರಾಜ್ಯಸಭೆಯ 1 ಸ್ಥಾನಕ್ಕೆ ಉಪಚುನಾವಣೆ ವೇಳಾಪಟ್ಟಿ ನಿಗದಿಯಾಗಿದ್ದು, ಬುಧವಾರ ಅಧಿಸೂಚನೆ ಪ್ರಕಟವಾಗಲಿದೆ. ಡಿ.1ರಂದು ಮತದಾನ ನಡೆಯಲಿದೆ ಎಂದು ಚುನಾವಣಾಧಿಕಾರಿಯೂ ಆದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಮಾಹಿತಿ ನೀಡಿದ್ದಾರೆ. ವಿಧಾನಸಭೆಯಿಂದ ರಾಜ್ಯಸಭೆಗೆ ಈ ಉಪಚುನಾವಣೆ ನಡೆಯಲಿದ್ದು, ರಾಜರಾಜೇಶ್ವರಿ ನಗರ ಹಾಗೂ ಶಿರಾ ಉಪಚುನಾವಣೆಯಲ್ಲಿ ಗೆದ್ದವರಿಗೂ ಮತದಾನದ ಹಕ್ಕು ನೀಡಲಾಗಿದೆ. ಹೀಗಾಗಿ ಒಟ್ಟು 224 ಚುನಾಯಿತ ಸದಸ್ಯ ಬಲದ ವಿಧಾನಸಭೆಯಲ್ಲಿ 222 ಮತದಾರರು ಹಕ್ಕು ಚಲಾಯಿಸಬಹುದಾಗಿದೆ.

**» ಬಿಜೆಪಿಯಲ್ಲಿ ಚಟುವಟಿಕೆ ಬಿರುಸು**

**ಹಿಗ್ಗಿದ ಬಲ:** ಆರ್ಆರ್ ನಗರ, ಶಿರಾ ಉಪ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ಇದರಿಂದಾಗಿ ವಿಧಾನಸಭೆಯಲ್ಲಿ ಸ್ಪೀಕರ್ ಹೊರತುಪಡಿಸಿ ಬಿಜೆಪಿ ಬಲ 118ಕ್ಕೇರಿದ್ದಾರೆ. ಪಕ್ಷೇತರ ಶಾಸಕ ಎಚ್. ನಾಗೇಶ್ ಅವರು ಯಡಿಯೂರಪ್ಪ ಸಚಿವ ಸಂಪುಟದ ಸಹೋದ್ಯೋಗಿ ಆಗಿರುವ ಕಾರಣ ಬಿಜೆಪಿ ಸಂಖ್ಯಾಬಲಕ್ಕೆ ಮತ್ತೊಂದು ಸೇರಿದೆ. ಬಲದಿಂದಾಗಿ ಉಪ ಚುನಾವಣೆಯಲ್ಲಿ ಅನಾಯಾಸವಾಗಿ ಗೆಲ್ಲುವ ಅವಕಾಶ ಪಡೆದಿದೆ.

ವಿಧಾನಪರಿಷತ್ ಮಾಜಿ ಸದಸ್ಯ ಎನ್. ಶಂಕ್ರಪ್ಪ, ಪಕ್ಷದ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಅಶೋಕ್ ಗಸ್ತಿ ಪತ್ನಿ ಸುಮಾ ಗಸ್ತಿ ಹೆಸರು ಈಗಾಗಲೆ ಶಿಫಾರಸಾಗಿವೆ. ಪಕ್ಷದ ಕೇಂದ್ರೀಯ ಚುನಾವಣೆ ಮಂಡಳಿಗೆ ಈ ಹೆಸರುಗಳನ್ನು ರಾಜ್ಯ ಕೋರ್ ಕಮಿಟಿ ರವಾನಿಸಿ, ಸ್ಥಳೀಯರಿಗೆ ಆದ್ಯತೆ ನೀಡಬೇಕೆಂಬ ಒತ್ತಾಸೆಯನ್ನೂ ನಿವೇದಿಸಿಕೊಂಡಿದೆ. ಸಿಎಂ ಯಡಿಯೂರಪ್ಪ ಒಲವು-ನಿಲುವಿಗೆ ಈ ಬಾರಿ ವರಿಷ್ಠರು ಮನ್ನಣೆ ನೀಡುವ ನಿರೀಕ್ಷೆಯಿದೆ.